ವಿಶ್ಲೇಷಣೆಗಳ ಮೂಲಕ ಅರಿತುಕೊಳ್ಳಲು ಈ ಪುಸ್ತಕವು ತಾತ್ವಿಕ ನಿಲುವುಗಳನ್ನು ನಮ್ಮಲ್ಲಿ ನೆಲೆಗೊಳಿಸುತ್ತದೆ. ರಾಜಕೀಯ ವಿಶ್ಲೇಷಣೆಗಳ ತಾತ್ವಿಕತೆ, ಸ್ವರೂಪ ಮತ್ತು ವಿಧಾನವನ್ನು ಮನಗಾಣಲು ಇದೊಂದು ಪ್ರಮುಖ ಕೈಪಿಡಿಯಾಗಿದೆ. ನಮ್ಮ ದೇಶದ ಪ್ರಭುತ್ವ ರಾಜಕಾರಣವನ್ನು ಬಿಡಿಸಿ ನೋಡಲು ನಾವು ಅಳವಡಿಸಿಕೊಳ್ಳುವ ವೈಚಾರಿಕ ಮಾದರಿಗಳನ್ನು ಪರಿಶೀಲಿಸಿ ನೋಡಿದರೆ ಆತಂಕವಾಗುತ್ತದೆ. ಏಕೆಂದರೆ, ಸಮೂಹಗಳ ಏಳಿಗೆಯನ್ನು ಬಯಸುವ ಬದಲಾಗಿ ಪ್ರಭುತ್ವದ ಹಿತವನ್ನು ಕಾಯುವ ಅನೈತಿಕ ವ್ಯವಹಾರದಲ್ಲಿ ನಾವು ತೊಡಗಿಕೊಳ್ಳುತ್ತೇವೆ ಅನ್ನುವುದು ಇದೀಗ ಚರಿತ್ರೆ. ಇಂತಹ ಅಪವಿತ್ರ ಮೈತ್ರಿ ಹಾಗೂ ಅನೈತಿಕ ಬಾಂಧವ್ಯದಿಂದ ಬಿಡುಗಡೆ ಪಡೆಯಲು ಚಾಮ್‌ಸ್ಕಿಯ ಚಿಂತನೆಗಳು ವಿಮೋಚಕ ಶಕ್ತಿಯಾಗಿ ಒದಗಿಬರುತ್ತವೆ.

ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ಹಾಗೂ ರಾಜಕೀಯ ಮತ್ತು ಆರ್ಥಿಕ ಅಜೆಂಡಾಗಳನ್ನು ಶಾಶ್ವತಗೊಳಿಸುವಲ್ಲಿ ಸಮೂಹ ಮಾಧ್ಯಮದ ಪಾತ್ರವನ್ನು ಪರಿಶೀಲಿಸುವ ಚರ್ಚೆಗಳು 'ಮ್ಯಾನುಫ್ಯಾಕ್ಚರಿಂಗ್ ಕನ್ಸೆಂಟ್' ಅನ್ನುವ ಪುಸ್ತಕದಲ್ಲಿ ಮೈದಾಳಿವೆ. ಮಾಧ್ಯಮಗಳ ಪಕ್ಷಪಾತಿ ನಿಲುವು ಮತ್ತು ಕಾರ್ಪೊರೇಟ್ ಶಕ್ತಿಗಳು ಇದನ್ನು ನಿರ್ದೇಶಿಸುವ, ನಿಯಂತ್ರಿಸುವ ಹಾಗೂ ತಮ್ಮ ಪ್ರಭಾವಗಳನ್ನು ಬಳಸಿಕೊಳ್ಳುವ ಬಗೆಗಳನ್ನು ಚಾಮ್‌ಸ್ಕಿ ಮತ್ತು ಹರ್ಮನ್ ಅವರು ಈ ಪುಸ್ತಕದಲ್ಲಿ ಎತ್ತಿ ತೋರಿಸಿದ್ದಾರೆ. ನಮ್ಮ ದೇಶದ ಮಾಧ್ಯಮಗಳ ಒಟ್ಟು ಗ್ರಹಿಕೆ ಮತ್ತು ತಾತ್ವಿಕ ಬದ್ಧತೆಯಲ್ಲಿ ಉಂಟಾಗಿರುವ ಅಪಚಾರಗಳನ್ನು ನೋಡಿದರೆ, ನಮ್ಮ ದೇಶದ ಕೆಲವು ಮಾಧ್ಯಮಗಳ ಹುನ್ನಾರ ನಮಗೆ ಮನವರಿಕೆ ಆಗುತ್ತದೆ. ಅಂದರೆ ಮುಖ್ಯವಾಹಿನಿ ಮಾಧ್ಯಮಗಳೇ ಪ್ರಸ್ತುತಪಡಿಸುವ ಮಾಹಿತಿ ಬಂಡವಾಳಶಾಹಿ ಹಾಗೂ ಕಾರ್ಪೊರೇಟ್ ಶಕ್ತಿಗಳ ನಿರ್ದೇಶನದ ಒತ್ತಾಯಕ್ಕೆ ಬಲಿಯಾಗಿವೆ. ಜನಸಾಮಾನ್ಯರು ಕೂಡ ಮಾಧ್ಯಮದ ಅಪಚಾರಗಳನ್ನು ಪ್ರಶ್ನಿಸುವ ಗೋಜಿಗೆ ಹೋಗದಂತಹ ಹೀನಾಯ ಸ್ಥಿತಿಯಲ್ಲಿದ್ದಾರೆ. ಮಾಧ್ಯಮಗಳ ಕುಶಲತೆ, ವೃತ್ತಿಪರತೆ, ಸಾಮಾಜಿಕ ಬದ್ಧತೆ ಹಾಗೂ ಜನಪರವಾಗಿ ಮಾಧ್ಯಮ ಹೇಗೆ ಕೆಲಸ ಮಾಡಬೇಕು ಮತ್ತು ಇದಕ್ಕೆ ಬೇಕಾದ ಆಳವಾದ ತಿಳಿವಳಿಕೆಯನ್ನು ಚಾಮ್‌ಸ್ಕಿ ಮತ್ತು ಹರ್ಮನ್ ಅವರು ಮಂಡಿಸುತ್ತಾರೆ. ಮಾಧ್ಯಮ ಅನ್ನುವುದು ಜನರ ಕಲ್ಯಾಣಕ್ಕಾಗಿ ಇರುವ ಮಾಧ್ಯಮವೇ ಹೊರತು ರಾಜಕೀಯ ದಲ್ಲಾಳಿಯಾಗಿ ಕೆಲಸವನ್ನು ಮಾಡುವುದಕ್ಕಲ್ಲ ಅನ್ನುವ ಎಚ್ಚರವನ್ನು ಚಾಮ್‌ಸ್ಕಿ ಸೂಕ್ಷ್ಮವಾಗಿ ವಿಶ್ಲೇಷಿಸುತ್ತಾರೆ.

ಚಾಮ್‌ಸ್ಕಿಯ ರಾಜಕೀಯ ಬರಹಗಳು, ಭಾಷಣಗಳು, ಸಂದರ್ಶನಗಳು ಮತ್ತು ಚರ್ಚೆಗಳು ಅಮೆರಿಕದ ವಿದೇಶಾಂಗ ನೀತಿ, ಕಾರ್ಯಚಟುವಟಿಕೆ ಮತ್ತು ಕಾರ್ಪೊರೇಟ್ ಪ್ರಭಾವ ಸೇರಿದಂತೆ ವ್ಯಾಪಕ ಶ್ರೇಣಿಯ ವಿಷಯಗಳನ್ನು ಒಳಗೊಂಡಿರುತ್ತವೆ. ಎಷ್ಟೇ ಗಂಭೀರವಾದ ವಿಷಯ ಅಥವಾ ಸಂಕೀರ್ಣವಾದ ವಿಚಾರ/ಸಮಸ್ಯೆಯನ್ನು ಗ್ರಹಿಸುವ, ವಿಶ್ಲೇಷಿಸುವ ವಿಶಿಷ್ಟ ಸಾಮರ್ಥ್ಯ ಚಾಮ್‌ಸ್ಕಿಗೆ ಸಹಜವಾಗಿಯೇ ದಕ್ಕಿದೆ. ರಾಜಕೀಯ ಮತ್ತು ಬೌದ್ಧಿಕ ಚಿಂತನೆಯ ಸಮಗ್ರ ಅವಲೋಕನವನ್ನು ಚಾಮ್‌ಸ್ಕಿಯ ಚಿಂತನೆಗಳಲ್ಲಿ ನೆಲೆಗೊಂಡಿವೆ. ನಮ್ಮ ಸಮಾಜವನ್ನು ರೂಪಿಸುವುದಕ್ಕೆ ಅಗತ್ಯವಾದ ವೈಚಾರಿಕ ಆಯಾಮಗಳು ಇವರ ಚಿಂತನೆಯಲ್ಲಿ ಯಥೇಚ್ಛವಾಗಿ ದೊರೆಯುತ್ತವೆ. 'ಅಂಡರ್‌ಸ್ಟ್ಯಾಡಿಂಗ್ ಪವರ್' ಅನ್ನುವ ಕೃತಿಯು ಈ ನೆಲೆಯ ತಾತ್ವಿಕತೆಯನ್ನು ಪ್ರಚುರಪಡಿಸುತ್ತದೆ. ಅಂದರೆ, ಈ ಪುಸ್ತಕವು ಚಾಮ್‌ಸ್ಕಿಯ ರಾಜಕೀಯ ಮತ್ತು ಬೌದ್ಧಿಕ ಚಿಂತನೆಯ ಸಮಗ್ರ ಅವಲೋಕನವನ್ನು ನೀಡುತ್ತದೆ.

ವಲಸೆಯ ಬಿಕ್ಕಟ್ಟು, ಭಯೋತ್ಪಾದನೆಯ ವಿರುದ್ಧದ ಹೋರಾಟ, ಯುರೋಪಿಯನ್ ಒಕ್ಕೂಟದ ಸಮಸ್ಯೆಗಳು, ಯುನೈಟೆಡ್ ಸ್ಟೇಟ್‌ನ ಚುನಾವಣಾ ವ್ಯವಸ್ಥೆಯಲ್ಲಿನ ದೋಷಗಳು ಇತ್ಯಾದಿಗಳನ್ನು ಒಳಗೊಂಡಂತೆ ಕಳೆದ ಕೆಲವು ವರ್ಷಗಳಿಂದ ಜಾಗತಿಕ ರಾಜಕೀಯದ ಅತ್ಯಂತ ಪ್ರಮುಖ ಸಮಸ್ಯೆಗಳನ್ನು ಚಾಮ್‌ಸ್ಕಿ ವಿಶ್ಲೇಷಿಸಿದ್ದಾನೆ. ಆಧುನಿಕ ಪ್ರಪಂಚದ ರಾಜಕೀಯ ಮತ್ತು ಆರ್ಥಿಕ ಜೀವನ ಮತ್ತು ಅಂತರರಾಷ್ಟ್ರೀಯ ಸಂಬಂಧಗಳ ಕುರಿತು ತನ್ನ ಅನೇಕ ಪುಸ್ತಕ ಮತ್ತು ಲೇಖನಗಳಲ್ಲಿ ಚರ್ಚಿಸಿದ್ದಾನೆ. ನವ ಉದಾರವಾದವನ್ನು ಟೀಕಿಸುವುದರ ಜೊತೆಗೆ ಆರ್ಥಿಕತೆ ಮತ್ತು ರಾಜಕೀಯದ ಕಾರ್ಪೊರೇಟ್ ವ್ಯವಸ್ಥೆ, ಪ್ರಸ್ತುತ 'ಜಾಗತೀಕರಣ' ಬ್ಯಾನರ್ ಅಡಿಯಲ್ಲಿ